Doc 477
T-P-2

Reg No B C 155 13 — 5 — 72

55th Year of Publication ★ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪರಮೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ಕನ್ನಡಿಗರ ಸಮ್ಮೇಳನ

ಕಾಲ್ಚೆಂಡು ಆಟಗಾರರಲ್ಲಿ ಭ್ರಷ್ಟಾಚಾರ

ಪಶ್ಚಿಮ ಜರ್ಮನಿಯಲ್ಲಿ 3 ಫುಟ್ ಬಾಲ್ ಕ್ಲಬ್‌ಗಳಸೃಷ್ಟಿ ಲಂಚ ಮತ್ತು ಭ್ರಷ್ಟಾಚಾರದ ಆಪಾದನೆಗಾಗಿ ವಜಾಮಾಡಲಾಗಿದೆ – 2 ಕ್ಲಬ್‌ಗಳ ಡೈರೆಕ್ಟರುಗಳಿಗೆ ಜುಲ್ಮಾನೆ ವಿಧಿಸಲಾಗಿದೆ – 14 ಆಟಗಾರರ ಮೇಲೆ ಜೀವಾವಧಿ ಪ್ರತಿಬಂಧಕ ವಿಧಿಸಲಾಗಿದೆ

ಕಲೋನಿನ ಖ್ಯಾತ ಅಂತರರಾಷ್ಟ್ರೀಯ ಗೋಲ್ ಕೀಪರ್ 31 ವರ್ಷದ ಮ್ಯಾಫ್ರೈಡ್ ಮಂಗೋಲಿಟ್ಸ್ ಲಂಚ ಸ್ವೀಕರಿಸಿದ ಆಪಾದನೆಗಾಗಿ ಫುಟ್‌ಬಾಲ್ ಸಂಸ್ಥೆಗಳಿಂದ ಜೀವಾವಧಿ ಹೊರದೂಡಲ್ಪಟ್ಟಿದ್ದಾನೆ : ಅದಕ್ಕಾಗಿ ಅವನು ಈಗ ಅಮೇರಿಕಾದಲ್ಲಿ ತನ್ನ ಅದೃಷ್ಟ ಪರೀಕ್ಷಿಸಿಕೊಳ್ಳಲಿರುವನು ; ಅಮೆರಿಕಾದ ಬಂಗಾಸ್ ಫುಟ್‌ಬಾಲ್ ಸಂಸ್ಥೆ ಅವನಿಗೆ ವರ್ಷಕ್ಕೆ 25000 ಡಾಲರು ಕೊಡಲು ಮುಂದೆಬಂದಿದೆ ; ಪಶ್ಚಿಮ ಜರ್ಮನಿಯಲ್ಲಿ ಅವನ ಮೇಲಿನ ಪ್ರತಿಬಂಧಕ ಸಡಲಿಸಲ್ಪಡಬಹುದೆಂದು ಅವನ ವಕೀಲರ ಅಭಿಪ್ರಾಯವಾಗಿದೆ : ಅವನ ಅಪೀಲು ತೀರ್ಮಾನವಾದನಂತರ ಅವನ ಯೋಜನೆಗಳೇನೆಂಬುದು ಗೊತ್ತಾಗುತ್ತದೆ.

★

ವೈದ್ಯಕೀಯ ವಿಷಯ

ಬೆಂಗಳೂರು— ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆಗೆ ಸರ್ಕಾರ ಪ್ರೋತ್ಸಾಹ ನೀಡುತ್ತಿದ್ದು ಈದಿಶೆಯಲ್ಲಿ ವಿವಿಧ ವಿಷಯಗಳನ್ನು ಕುರಿತು ವೈದ್ಯರು ಕಾಯವೆಸಗಲು ಮುಂದಾಗಬೇಕೆಂದು ಆರೋಗ್ಯ ಸಚಿವರು ಶ್ರೀ ಸಿದ್ಧವೀರಪ್ಪನವರು ಶಿವಮೊಗ್ಗದಲ್ಲಿ ಸ್ನಾತಕೋತ್ತರ ವೈದ್ಯಕೀಯ ಪದವೀಧರರ ಸಂಘದ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು.

★

ಗುಲ್ಬರ್ಗ— ಇಲ್ಲಿಯ ವಾಣಿಜ್ಯ ತೆರಿಗೆ ಕಛೇರಿಯ ರೂ. 30000 ದುರುಪಯೋಗ ಪಡಿಸಿಕೊಂಡ ಒಬ್ಬ ಗುಮಾಸ್ತನು ದಸ್ತಗಿರಿ ಮಾಡಲ್ಪಟ್ಟನು

ರಾಜರ ಖಾಸಗಿ ಆಸ್ತಿ

ನವದೆಹಲಿ— ಮಾಜಿ ರಾಜರು ತಮ್ಮ ಖಾಸಗಿ ಆಸ್ತಿಯ ವಾರಾಟ ಮತು ಬೇರೆರೀತಿ ವಿಲೇವಾರಿ ಮೇಲೆ ಸರ್ಕಾರ ನಿರ್ಬಂಧ ಹಾಕಿಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಹೆಸರು ಬದಲಾವಣೆ

ಮೈಸೂರು— ಕರ್ನಾಟಕ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಮಿತಿಯು ರಾಜ್ಯದ ಹೆಸರು ಬದಲಾವಣೆಯನ್ನು ಸರ್ಕಾರ ನಿರ್ಧರಿಸಿ, ಐತಿಹಾಸಿಕ ಮತ್ತು ಸಾಹಿತ್ಯ ಸಾಹಿತ್ಯ ರೀತಿಯಲ್ಲಿ 'ಕರ್ನಾಟಕ" ವೆಂದಾಗಬೇಕೆಂದಿದೆ.

○

ನೀರು ಶುದ್ಧಿಗೊಳಿಸಲು

ಲಡ್ವಿಗ್‌ಷಾರ್ಫೆ (ಡಾಡ್)— ಫೆಡರಾಲ್ ಜರ್ಮನಿಯಲ್ಲಿ ಅನೇಕ ನದಿಗಳೂ ಸರೋವರಗಳೂ ಕುಲಿಷಿತವಾಗಿ ಕುಡಿಯುವ ನೀರಿಗೇ ಒಂದು ಸಮಸ್ಯೆಯಾಗಿದೆ. ಈಗ ವಿಜ್ಞಾನಿಗಳು ಕೇವಲ ಅತ್ಯಲ್ಪ ವೆಚ್ಚದಲ್ಲಿ, ಅತಿ ಶೀಘ್ರವಾಗಿ ಎಷ್ಟು ವಿಸ್ತಾರವಾದ ಜಲಾಶಯವನ್ನಾದರೂ ಶುದ್ಧಿಗೊಳಿಸಬಹುದಾದ ಸಾಧನವನ್ನು ಕಂಡುಹಿಡಿದಿದ್ದಾರೆ ಲುಡ್ವಿಗ್‌ಷಾಫಿನಲ್ಲಿನ ಒಂದು ಕೈಗಾರಿಕಾ ಸಂಸ್ಥೆಯು ಅಲ್ಯೂಮಿನಿಯಂನ ನಿರಾಕೃತ ವಸ್ತುವಿನಿಂದ ಕೇವಲ ಗಂಟೆಗಳ ಕಾಲದಲ್ಲಿ ಶುದ್ಧಿಮಾಡಬಹುದೆಂದು ಕಂಡುಹಿಡಿದಿದ್ದಾರೆ. (ಯು ಪಿ-ಎಸ್)

★

ಲಾಟರಿ ಹಣ

ಬೆಂಗಳೂರು— ರಾಜ್ಯದ ಲಾಟರಿ ಉತ್ಪತ್ತಿಯನ್ನು ಇನ್ನು ಮುಂದೆ, ಇತರ ರಾಜ್ಯಗಳಲ್ಲಿ ಮಾಡುತ್ತಿರುವಂತೆ, ನಿರ್ದಿಷ್ಟ ಅಭಿವೃದ್ಧಿ ಕಾರ್ಯಗಳಿಗೆ ಇಡಲು ಸರ್ಕಾರ ಯೋಜಿಸಿದೆ.

ರಷ್ಯಾ ಕೇಳಿಕೆ

ನ್ಯಾಸ್ಕೊ— ಅಮೇರಿಕಾ ಉತ್ತರ ವಿಯಟ್ನಾಂ ಸುತ್ತ ಹಾಕಿರುವ ದಿಗ್ಬಂಧನವನ್ನು ತೆಗೆಯಬೇಕೆಂದು ರಷ್ಯಾ ಕೇಳಿಕೆ ಹಾಕಿದೆ.

★

ವೃದ್ಧ ವಯಸ್ಕರ ನಿವಾಸಕ್ಕೆ

ಸ್ಟುಟಗಾರ್ಟ್ (ಡಾಡ್)— ಫೆಡರಾಲ್ ಜರ್ಮನಿಯ ಆಲೆಗೂ ಎಂಬಲ್ಲಿ ಆಂದವಾದ, ಆಂದಾಜಿಂದ ರಚಿಸಲಾದ ವೃದ್ಧ ವಯಸ್ಕರ ನಿವಾಸಕ್ಕೆ ಅಂತಾರಾಷ್ಟ್ರೀಯ ಪ್ರಥಮ ಬಹುಮಾನ 6000 ಡಿ.ಎಂ. ಗಳು ದೊರೆತಿದೆ.

★

ಡಾ॥ ವಠಕವಿ ಬೇಂದ್ರಿಯವರಿಗೆ

ಸೊಲ್ಲಾಪುರದಲ್ಲಿ ಈ ಚೆಗೆ ನಡೆದ ಸನ್ಮಾನ ಸಮಾರಂಭದಲ್ಲಿ ಕನ್ನಡದ ವರಕವಿ ಡಾ॥ ಬೇಂದ್ರಿಯವರನ್ನು "ಕರ್ನಾಟಕ–ಮಹಾರಾಷ್ಟ್ರಗಳ ಸಾಂಸ್ಕೃತಿಕ ಸೇತುವೆ" ಎಂದು ಬಣ್ಣಿಸಲಾಯಿತು – ಬೆಳ್ಳಿಯ ಒಂದು ಕೆಜಿ ತೂಕದ ವಿಠಲನ ಪ್ರತಿಮೆಯನ್ನೂ ಕಾಶ್ಮೀರದ ಶಾಲನ್ನೂ ಕವಿ ಬೇಂದ್ರಿಯವರಿಗೆ ಅರ್ಪಿಸಿ ಗೌರವಿಸಲಾಯಿತು.

●

ನಿಕ್ಸನ್ನರ ಮೇಲೆ ಮೊಖದ್ದಮೆ

ವಾಷಿಂಗ್ಟನ್— ವಿಯಟ್ನಾಂನಲ್ಲಿ ವಿಮಾನ ಮತ್ತು ನೌಕಾ ಕಾರ್ಯಾಚರಣೆ ನಿಲ್ಲಿಸುವಂತೆ ಅಧ್ಯಕ್ಷ ನಿಕ್ಸನ್ನರ ಮೇಲೆ 23 ಮಂದಿ ಡೆಮೊಕ್ರಾಟರು ಮೊಕದ್ದಮೆ ಹಾಕಿದ್ದಾರೆ.

★

ಅಮ್ಮೆತ್ರಿ ಕಾರ್ಯ

ವಾಷಿಂಗ್ಟನ್— ವಿಯಟ್ನಾಂ ದಿಗ್ಬಂಧನ ತುತ್ತು ಬಾಂಬು ಮಾಡುವಿಕೆಯನ್ನು ಭಾರತವು ಟೀಕಿಸಿ ಹೇಳಿಕೆ ಹೊರಡಿಸಿರುವುದು ಅಮ್ಮೆತ್ರಿ ಕಾರ್ಯವೆಂದು ಅಮೇರಿಕಾ ಸರಕಾರ ಹೇಳಿದೆ.

ವಿಶ್ವಸಂಸ್ಥೆ ಪ್ರವೇಶ ಪ್ರತಿಬಂಧಕ

ವಿಶ್ವಸಂಸ್ಥೆ— ಯುದ್ಧವಿರೋಧಿ ಹೃದಯ ಶನಕಾರರ ಗಲಾಟೆ ತಡೆಗಟ್ಟಲು ವಿಶ್ವ ಸಂಸ್ಥೆಯು ಮ್ಯಾಹರ್ಟ್ ಪೂರ್ವ ಸದಿಯು ಅಂತರರಾಷ್ಟ್ರೀಯ ಕಾಂಪೌಂಡನ್ನು ಮುಚ್ಚಿದೆ

●

ಕಾರ್ಮಿಕ–ಬಂಡವಾಳಗಾರ

ನವಹೆಹಲಿ— ವಿಶಾಖಪಟ್ಟಣದ ಒಬ್ಬ ಕಾರ್ಮಿಕ ನ್ಯಾಯಕನ ಮನೆಯಲ್ಲಿ ರೂ 16000 ಹಣವೂ, ರೂ 5 ಲಕ್ಷ ಬ್ಯಾಂಕ್‌ನಲ್ಲಿನ ಫಿಕ್ಸೆಡ್‌ಡಿಪಾಜಿಟ್ ಸಾಕ್ಷ್ಯವೂ ಪತ್ತೆಯಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

●

5 ದಿನಗಳ ವಾರ

ಬೆಂಗಳೂರು— ಈಗಿನ 6 ದಿನಗಳ ವಾರವು ಸರ್ಕಾರದ ಈಗಿನ ಯೋಜನೆಯಂತೆ ಹೋಗುವ ಸಂಭವವಿದೆ.

○

ಕನ್ನಡಿಗರ ಸಮ್ಮೇಳನ

ಬೆಂಗಳೂರು— ಗಡಿ ವಿಷಯದಲ್ಲಿ ಮಹಾರ್ಜ ಕವಿರ್ಮ ವರದಿಯನ್ನು ಜಾರಿಗೆ ತರುವಂತೆ ಒತ್ತಾಯಮಾಡಲು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಮ್ಮೇಳನವನ್ನು ಮೇ 21 ರಿಂದ ನಡೆಸಲು ಯೋಜಿಸಿದೆ ಎಂದು ಅಧ್ಯಕ್ಷ ಶ್ರೀ ಡಿ. ನಾರಾಯಣರವರು ಪತ್ರಿಕೆಯವರಿಗೆ ತಿಳಿಸಿದರು.

★

ಪೌರಸನ್ಮಾನ

ಮೈಸೂರು— ಶುಕ್ರವಾರ ಸಂಜೆ ಸಾರಿಗೆ ಮತ್ತು ಪ್ರವಾಸೋದ್ಯಮ ಸಚಿವ ಶ್ರೀ ಅಜೀಜ್ ಸೇಠರಿಗೆ ಟೌನ್ ಹಾಲಿನಲ್ಲಿ ಪೌರ ಸನ್ಮಾನ ನೀಡಲಾಯಿತು ; ಪುರಸಭಾಧ್ಯಕ್ಷ ಶ್ರೀ ಸೋಮಸುಂದರಂರವರು ಸಚಿವರಿಗೆ ವಿನ್ನವತ್ತಳೆ ಅರ್ಪಿಸಿ, ಕೆಲವು ಬೇಡಿಕೆಗಳನ್ನು ಅವರ ಮುಂದಿಟ್ಟರು.

ರೈತ ಮತ್ತು ಕಾರ್ಮಿಕ ಸೇವಾ ಸಂಘ

ಮೈಸೂರು ರಾಜ್ಯದಲ್ಲಿ ಜನಾನನ ಕೆಲಸ ಮಾಡುವವನಿಗೆ ಸುಮಾರು ರೂ. 180 ತಿಂಗಳಿಗೆ ದೊರೆಯುತ್ತದೆ ಅಧಿಕಾರಿಗಳಿಗೆ ಸುಮಾರು ರೂ. 2000 ತಿಂಗಳಿಗೆ ದೊರೆಯುತ್ತದೆ. ವೇತನದಲ್ಲಿ ಇಷ್ಟು ಅಂತರವಿದ್ದರೂ, ಸಾಮಾನ್ಯವಾಗಿ ಹೊಟ್ಟೆ ತುಂಬಲು ಖರ್ಚುವೆಚ್ಚಗಳು ಇಬ್ಬರಿಗೂ ಒಂದೇ ಇರುತ್ತದೆ. ಈ ಕಾರಣದಿಂದ ಜವಾನನಿಗೂ ಹೆಚ್ಚು ವೇತನ ಕೊಡಬೇಕಾದುದು ಸಾಮಾಜಿಕ ನ್ಯಾಯ. ಆದರೆ ಸರ್ಕಾರ ಈ ರೀತಿ ಕೊಡಲು ಸಾಧ್ಯವೇ? ಇದು ಸಾಧ್ಯವಿಲ್ಲವೆಂದಾಗ ಭೂವಿತಿಯಲ್ಲಿ ಜೀವನ ಮಾಡುವ ರೈತನಿಗೆ ಮಿತಿ ಏಕೆ ಹಾಕಬೇಕು? ಈ ದೃಷ್ಟಿಯಿಂದ ಭೂ ಸುಧಾರಣೆ ಕಾನೂನು ತರುವುದೇ ತಪ್ಪು ಎಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿ. ಜಂಬೂಗೌತರ ಅಧ್ಯಕ್ಷತೆಯಲ್ಲಿ ಸೇರಿದ್ದ ರೈತ ಮತ್ತು ಕಾರ್ಮಿಕ ಸೇವಾಸಂಘದ ಕಾರ್ಯಕಾರಿ ಸಮಿತಿ ಭೂ ಸಮಸ್ಯೆಯನ್ನು ಕೂಲಂಕುಶವಾಗಿ ಪರಿಶೀಲಿಸಿ, ನಿರ್ಣಯವನ್ನು ಅಂಗೀಕರಿಸಿ, ಭೂ ಮಾಲೀಕರಿಗೆ ಬೇಸಹತ್ ಭೂಮಿಯನ್ನು ಕೊಡಿಸಿ ಅವನಿಗೆ ಕಷ್ಟನಷ್ಟಗಳುಂಟಾಗಿರುವುದನ್ನು ತಪ್ಪಿಸಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ, ಕೇಂದ್ರ ರೈಲ್ವೆ ಮಂತ್ರಿ ಶ್ರೀ ಕೆ. ಹನುಮಂತಯ್ಯ, ಮೈಸೂರು ಮುಖ್ಯಮಂತ್ರಿ ಶ್ರೀ ಡಿ ದೇವರಾಜ ಅರಸು, ಕಂದಾಯಮಂತ್ರಿ ಶ್ರೀ ಹುಚ್ಚುವಳ್ಳಿ ಗೌಡ ಮತ್ತು ಕೈಗಾರಿಕೆ ಮಂತ್ರಿ ಶ್ರೀ ಎಸ್. ಎಂ. ಕೃಷ್ಣ ಅವರನ್ನು ಒತ್ತಾಯ ಪೂರ್ವಕವಾಗಿ ಸ್ವಾರ್ಥಿಸುತ್ತದೆ.

ಸಮಿತಿ ಮತ್ತೊಂದು ನಿರ್ಣಯ ಅಂಗೀಕರಿಸಿ, ಮನೆ ತೆರಿಗೆ ಮೈಸೂರು ನಗರದಲ್ಲಿ ಈಗಾಗಲೇ ವಿಪರೀತ ಹೆಚ್ಚಾಗಿರುವುದರಿಂದ ಕಂದಾಯ ಪುನರ್ವಿಮರ್ಶೆಯನ್ನು ಕೈಬಿಡುವಂತೆ ಸರ್ಕಾರವನ್ನು ಒತ್ತಾಯ ಮಾಡಿದೆ.

Quality Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

Contribute Liberally

to the National Defence Fund

ವುಡ್‌ಲ್ಯಾಂಡ್ 12-5-72ರಿಂದ ಅಮೋಘ 2ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೇಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ತುಂಬಿಹರಿಯುತ್ತಿದೆ

ಅಪೆರಾ 11 5 72 ರಿಂದ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ಶಮಾದೇವಿ, ಬೇಬಿ ರಾಣಿ, ಮೈಸೂರಿನ ವೈ ॥ ಮೂಗ
ದಿನ 3 ಆಟಗಳು

SHAKTI

SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಕೊಣೆ, ಕ್ರೈಸ್ತ ಪೆಳ್ಳಿಪುಸ್ತಕ ಸೊಕ್ಕಿನ 'ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅಹಿಂಸಾ ಸ್ತ್ರೀಗಣಾಕ್ರಾಂತ್ಯ ಪರ್ಯಾಯ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಪಿಕ್ಚರ್ಸ್ ಜೊಳ್ಳಲು ಚಿತ್ರ

ಅನ್ನ - ತಾಯಿ ಮಗು

Protect the Cow

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore 4